**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

# ಸಿ.ಸಿ. ಸಂಖ್ಯೆಃ 115/2024

**ಸಾಕ್ಷಿಯನ್ನು ದಿಃ 15.12.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ತನ್ಜಿರ್ ಅಹಮ್ಮದ್ | ಸಿಡಬ್ಲ್ಯೂಃ 2 | ಪಿಡಬ್ಲ್ಯೂಃ 2 |
| ತಂದೆಯ ಹೆಸರು | ನಜೀರ್ ಅಹಮ್ಮದ್ | | |
| ವಯಸ್ಸು | 37 ವರ್ಷ | | |
| ಕೆಲಸ | ಟಿಂಬರ್ ಮರ್ಚೆಂಟ್ | | |
| ವಾಸಸ್ಥಳ | ಮುಸ್ಲಿಂ ಬ್ಲಾಕ್, ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ–1 ನನ್ನ ಅಕ್ಕ. ಚಾಸಾ–3 ನನ್ನ ಚಿಕ್ಕಮ್ಮ. ಚಾಸಾ–5 ನನ್ನ ತಾಯಿ. ಚಾಸಾ–4 ನನ್ನ ಮಾವನ ಮಗ. ಆರೋಪಿತರು ಗೊತ್ತು. ಮನೆ ಮತ್ತು ಖಾಲಿ ಜಾಗದ ಬಗ್ಗೆ ಸಿವಿಲ್ ಕೇಸ್ ಇತ್ತು. ದಿನಾಂಕಃ 01.09.2023ರಂದು ಮಧ್ಯಾಹ್ನ ಸುಮಾರು 3–45 ಗಂಟೆಗೆ ನಾವು ವಾಸವಿರುವ ಮನೆಯ ಹತ್ತಿರ ಆರೋಪಿತರು ಶೆಡ್ ಹಾಕುತ್ತಿದ್ದರು. ಅದನ್ನು ಹಾಕಬೇಡಿ ಪ್ರಕರಣ ನ್ಯಾಯಾಲಯದಲ್ಲಿದೆ ಕೋರ್ಟ್ ನ ತೀರ್ಮಾನವಾದ ನಂತರ ಹೇಗೆ ಆದೇಶವಾಗುತ್ತದೆಯೋ ಎಂದು ಹಾಗೆ ಮಾಡೋಣ ಎಂದು ನಾವೆಲ್ಲರೂ ಆರೋಪಿತರಿಗೆ ಹೇಳಿದೆವು. ನಾನು ಫೋನ್ ನಲ್ಲಿ ವಿಡಿಯೋ ಮಾಡುತ್ತಿದ್ದೆ. ಆರೋಪಿತರು ನಮಗೆ ಕೆಟ್ಟ ಕೆಟ್ಟದಾಗಿ ಬೈಯ್ಯುತ್ತಿದ್ದರು. ನನ್ನನ್ನು 3ನೇ ಆರೋಪಿ ಹಿಡಿದುಕೊಂಡು, 1ನೇ ಆರೋಪಿ ಕೈಯನ್ನು ಮುಷ್ಟಿ ಮಾಡಿ ನನ್ನ ಬಲಗಣ್ಣಿಗೆ ಹೊಡೆದರು. ನನ್ನನ್ನು ತಕ್ಷಣ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮುಂದೆ ಏನಾಯಿತು ಎಂದು ನನಗೆ ಆಗ ಗೊತ್ತಾಗಲಿಲ್ಲ. ನನ್ನ ಚಿಕ್ಕಮ್ಮ ಚಾಸಾ–3 ರವರಿಗೆ 2,4 ಮತ್ತು 7ನೇ ಆರೋಪಿತರು ಕೈಯಿಂದ ಎದೆಗೆ ಮತ್ತು ಹೊಟ್ಟೆಗೆ ಹೊಡೆದರು. ಅವರ ಜುಟ್ಟು ಹಿಡಿದರು. ಆರೋಪಿತರೆಲ್ಲರೂ ನನ್ನನ್ನು ಉದ್ದೇಶಿಸಿ ನಿನ್ನನ್ನು ಕೊಲೆ ಮಾಡಿದರೆ ಎಲ್ಲಾ ಸರಿ ಹೋಗುತ್ತದೆ ಎಂದು ನನಗೆ ಪ್ರಾಣ ಬೆದರಿಕೆ ಹಾಕಿದರು. ನಾನು ಆಸ್ಪತ್ರೆಗೆ ದಾಖಲಾದೆ. ಹೆಚ್ಚಿನ ಚಿಕಿತ್ಸೆ ಗೆ ಮೈಸೂರಿಗೆ ಹೋಗುವಂತೆ ಹೇಳಿದರು. ಚಾಸಾ–3 ರವರು ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ 3 ದಿನ ಚಿಕಿತ್ಸೆ ಪಡೆದರು. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ಆರೋಪಿತರೆಲ್ಲರೂ ಗುಂಪುಕಟ್ಟಿಕೊಂಡು ಏಕಾ ಏಕಿ ನಮ್ಮ ಜೊತೆ ಗಲಾಟೆ ಮಾಡಲು ಬಂದರು ಎಂದರೆ ಸರಿ. ಅದೇ ಸಮಯದಲ್ಲಿ 5 ಮತ್ತು 6ನೇ ಆರೋಪಿತರು ಕೈಗಳಿಂದ ನನ್ನ ಮೈಕೈಗೆ ಹೊಡೆದರು ಎಂದರೆ ಸರಿ. 2,4 ಮತ್ತು 7ನೇ ಆರೋಪಿತರು ಚಾಸಾ-3 ರವರಿಗೆ ಹಲ್ಲೆ ಮಾಡುವಾಗ ನಾನು ಅಲ್ಲಿಯೇ ಇದ್ದು ನೋಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. MRH ವಕೀಲರಿಂದಃ**

ಆರೋಪಿತರೆಲ್ಲರೂ ಗುಂಪುಕಟ್ಟಿಕೊಂಡು ಏಕಾ ಏಕಿ ನಮ್ಮ ಜೊತೆ ಗಲಾಟೆ ಮಾಡಲು ಬಂದು, 5 ಮತ್ತು 6ನೇ ಆರೋಪಿತರು ಕೈಗಳಿಂದ ನನ್ನ ಮೈಕೈಗೆ ಹೊಡೆದರು ಮತ್ತು 2,4 ಮತ್ತು 7ನೇ ಆರೋಪಿತರು ಚಾಸಾ-3 ರವರಿಗೆ ಹಲ್ಲೆ ಮಾಡುವಾಗ ನಾನು ಅಲ್ಲಿಯೇ ಇದ್ದು ನೋಡಿದ್ದೇನೆ ಎಂದು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಚಾಸಾ-3 ರವರಿಗೆ 2, 4 ಮತ್ತು 7ನೇ ಆರೋಪಿತರು ಹಲ್ಲೆ ಮಾಡಿರುವ ವಿಷಯ ನನಗೆ ನಂತರ ಗೊತ್ತಾಯಿತು ಎಂದು ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡುವಾಗ ನಾನು ಅಲ್ಲಿಯೇ ಇದ್ದು, ಕಣ್ಣಾರೆ ನೋಡಿದೇನೆ ಎಂದು ಹೇಳಿದ್ದು, ಅದರಲ್ಲಿ ಯಾವುದು ಸತ್ಯ ಎಂದರೆ ನಾನು ಅಲ್ಲಿಯೇ ಇದ್ದೆ ಎನ್ನುವುದು ಸತ್ಯ. ಅಮೇಲೆ ವಿಚಾರ ಗೊತ್ತಾಯಿತು ಎಂದು ಹೇಳುವುದು ಸುಳ್ಳು. ಈ ಪ್ರಕರಣ ನಡೆದಿದೆ ಎನ್ನುವ ಪೂರ್ವದಲ್ಲಿ 2ನೇ ಆರೋಪಿ ಮತ್ತು ಅವರ ಮಕ್ಕಳು ಹಾಗೂ ಬಾವಂದಿರು ಹುಣಸೂರು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ ಅಸಲು ದಾವಾ ಸಂಃ 127/2023ನ್ನು ಹಿಸ್ಸೆ ಕೋರಿ ದಾಖಲಿಸಿದ್ದರು ಎಂದರೆ ಸರಿ. ಅದಕ್ಕೂ ಮೊದಲು 2ನೇ ಆರೋಪಿ ದಾನ ಪತ್ರ ರದ್ದು ಕೋರಿ ಅಸಲು ದಾವಾ ಸಂಃ218/2013ನ್ನು ದಾಖಲಿಸಿರುವ ವಿಷಯ ನನಗೆ ಗೊತ್ತಿದೆ ಎಂದರೆ ಸರಿ. ಸದರಿ ದಾವೆ ನಮ್ಮ ವಿರುದ್ಧ ತೀರ್ಮಾನವಾಯಿತು ಎಂದರೆ ಸರಿ. ಈ ಪ್ರಕರಣ ದಾಖಲಿಸುವ ಕಾಲಕ್ಕೆ ಅಸಲು ದಾವಾ ಸಂಃ 218/2013 ನಮ್ಮ ವಿರುದ್ಧ ತೀರ್ಪಾಗಿರುವ ವಿಚಾರ ನಮಗೆ ಗೊತ್ತಿತ್ತು ಎಂದರೆ ಇಲ್ಲ. 2-3 ವರ್ಷದ ನಂತರ ಸದರಿ ದಾವೆ ನಮ್ಮ ವಿರುದ್ಧ ತೀರ್ಪಾಗಿರುವ

ವಿಷಯ ಗೊತ್ತಾಯಿತು. ಸದರಿ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೇವೆ ಎಂದರೆ ನನಗೆ ಗೊತ್ತಿಲ್ಲ, ನನ್ನ ಚಿಕ್ಕಮ್ಮನಿಗೆ ಗೊತ್ತಿದೆ. ಗಲಾಟೆ ನಡೆಯಿತು ಎನ್ನುವ ನಿಖರವಾದ ಸ್ಥಳ ಯಾವುದು ಎಂದರೆ ಚಾಸಾ-3ರವರ ಮನೆಯ ಒಳಗೆ ಬಂದು ಹೊಡೆದಿದ್ದಾರೆ. ಘಟನೆ ನಡೆಯಿತು ಎನ್ನುವ ಸಮಯದಲ್ಲಿ ಮನೆಯ ಒಳಗೆ ಒಟ್ಟು 15 ಜನ ಇದ್ದೆವು. ಘಟನೆ ನಡೆಯಿತು ಎನ್ನುವ ಸ್ಥಳದ ಚೆಕ್ಕುಬಂದಿ ಹೇಳಲಾಗುವುದಿಲ್ಲ. ದಿನಾಂಕಃ01.09.2023ರಂದು ಮಧ್ಯಾಹ್ನ 3 ರಿಂದ 3-45 ಗಂಟೆ ಸಮಯದಲ್ಲಿ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 01.03.2023ರಂದು ಮಧ್ಯಾಹ್ನ 3 ರಿಂದ 3-45 ಗಂಟೆ ಸಮಯದಲ್ಲಿ ನಾವೆಲ್ಲರೂ ಈ ಪ್ರಕರಣದ ಆರೋಪಿತರಿಗೆ ಗುಂಪುಕಟ್ಟಿಕೊಂಡು ಹಲ್ಲೆ ಮಾಡಿದ್ದೇವೆ ಎಂದು ಕ್ರೈಂನಂ.184/2023 ದಾಖಲಾಗಿತ್ತು ಎಂದರೆ ಸರಿ. ಸುಳ್ಳು ಪ್ರಕರಣವಾಗಿತ್ತು. ಸದರಿ ಪ್ರಕರಣದಲ್ಲಿ ನಾವೆಲ್ಲರೂ ಠಾಣೆಗೆ ಹೋಗಿದ್ದೆವು ಎಂದರೆ ಇಲ್ಲ. ಕ್ರೈಂ ನಂ. 184/2023 ಏನಾಯಿತು ಎಂದು ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾವು ಠಾಣೆಗೆ ಹೋಗಿ ಜಾಮೀನು ಪಡೆದಿದ್ದೇವೆ ಎಂದರೆ ಇಲ್ಲ. ದಿನಾಂಕಃ01.09.2023 ರಂದು ಮಧ್ಯಾಹ್ನ 3 ರಿಂದ 3-45 ಗಂಟೆ ಸಮಯದಲ್ಲಿ ಇದ್ದರು ಎನ್ನುವ 15 ಜನರ ಹೆಸರು ಗೊತ್ತಿದೆ. ಆ ಸಮಯದಲ್ಲಿ ಇಬ್ಬರು ಅಪರಿಚಿತರು ಇದ್ದರು. ಅವರಿಬ್ಬರು ಬಿಡಿಸಲು ಬಂದಿದ್ದರು. ದಿನಾಂಕಃ 01.09.2023ರಂದು 3-45 ರಿಂದ 4-00 ಗಂಟೆಯವರೆಗೆ ನಾನು ಶಾತಾಪ್ ಮತ್ತು ಶಫಿವುಲ್ಲಾ ರವರ ಜೊತೆ ಬೈಕಿನಲ್ಲಿ ಹುಣಸೂರು ಆಸ್ಪತ್ರೆಗೆ ಹೋಗಿದ್ದೆ. ವೈದ್ಯರು ನನ್ನನ್ನು ಮಾತನಾಡಿಸಿದರು. ವೈದ್ಯರ ಬಳಿ 3-4 ಜನ ಹಲ್ಲೆ ಮಾಡಿದ್ದಾರೆ ಎಂದು ಹೇಳಿದ್ದೆ. ಆದರೆ ಹೆಸರು ಹೇಳಿಲ್ಲ. ಅವರು ನಿಮಗೆ ಪರಿಚಿತರು ಅಥವಾ ಅಪರಿಚಿತರು ಎಂದು ಹೇಳಿದ್ದಿರಾ ಎಂದರೆ ವೈದ್ಯರು ಅಷ್ಟೆಲ್ಲಾ ಕೇಳಿಲ್ಲ. ನನಗೆ ಯಾರು ಹೊಡೆದಿಲ್ಲ ಆ ಕಾರಣ ನಾನು ಹೆಸರು ಹೇಳಿಲ್ಲ ಎಂದರೆ ಸರಿಯಲ್ಲ. ನನಗೆ ಮೂಗಿನಿಂದ ರಕ್ತ ಬರುತ್ತಿತ್ತು ಕಣ್ಣು ಊದಿಕೊಂಡಿತ್ತು. ಬಟ್ಟೆಗೆ ಸ್ವಲ್ಪ ಆಗಿತ್ತು. ಪೋಲಿಸರು ಬಟ್ಟೆ ತೆಗೆದುಕೊಂಡಿಲ್ಲ. ಕೈ ಮುಷ್ಟಿಯಿಂದ ಹೊಡೆದಿದ್ದಾರೆ ಎಂದು ನಾನು ವೈದ್ಯರ ಬಳಿ ಹೇಳಿದ್ದೇನೆ. ಯಾವ ಕೈಯಿಂದ ಹೊಡೆದಿದ್ದಾರೆ ಎಂದು ವೈದ್ಯರಿಗೆ ಹೇಳಿಲ್ಲ. ವೈದ್ಯರು ನನ್ನನ್ನು ಉಪಚರಿಸಿದರು. ದಿನಾಂಕಃ 01.09.2023ರಂದು ಮಧ್ಯಾಹ್ನ 3 ರಿಂದ 3-45 ಗಂಟೆ ಸಮಯದಲ್ಲಿ ನಾವೇ 2 ಆರೋಪಿ ಮತ್ತು ಅವರ ಮಕ್ಕಳಿಗೆ ಕಲ್ಲು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು 2ನೇ ಆರೋಪಿಯನ್ನು ತಳ್ಳಿ ಹಾಕಿ ನಮ್ಮ ವಿರುದ್ಧ ಕಲಂ 354(ಬಿ) ರಡಿಯಲ್ಲಿ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿ

ಪ್ರಕರಣದಲ್ಲಿ ನಮ್ಮನ್ನು ಪೋಲಿಸರು ಬಂಧಿಸುತ್ತಾರೆ ಎಂದು ಹೆದರಿ ಈ ಸುಳ್ಳು ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಮಾನ್ಯ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಶಾರದ ಎನ್ನುವವರು ನೀಡಿದ ದೂರಿನ ಮೇರೆಗೆ IPC ಕಲಂ 354(ಬಿ) ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಅದು ಖುಲಾಸೆಯಾಗಿದೆ. ಆರೋಪಿತರು ನಮಗೆ ಉರ್ದು ಭಾಷೆಯಲ್ಲಿ ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಪ್ರಾಣ ಬೆದರಿಕೆ ಹಾಕಿದರು. ನಾನು ಪೋಲಿಸರಿಗೆ ಹೇಳಿಕೆ ನೀಡುವಾಗ ಉರ್ದು ಭಾಷೆಯಲ್ಲಿ ಬೈದ ಶಬ್ದಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಹೇಳಿದ್ದೇನೆ. ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಿದರು ಮತ್ತು ಅವಾಚ್ಯ ಶಬ್ದಗಳಿಂದ ಬೈದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕಃ01.09.2023ರಂದು ಮಧ್ಯಾಹ್ನ 3.45 ಗಂಟೆ ಸಮಯಕ್ಕೆ ಆರೋಪಿತರು ಗುಂಪುಕಟ್ಟಿಕೊಂಡು ಬಂದು ಮನೆಯ ವಿಚಾರದಲ್ಲಿ ಗಲಾಟೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಗಲಾಟೆಯಲ್ಲಿ ನನಗೆ ಮೂಗಿಗೆ ಮತ್ತು ಕಣ್ಣಿಗೆ ಏಟಾಗಿತ್ತು ಎಂದು ಹಾಗೂ ಆರೋಪಿತರು ನನಗೆ ಹಲ್ಲೆ ಮಾಡಿದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಸಿವಿಲ್ ದಾವೆಯಲ್ಲಿ ನಮಗೆ ಸೋಲಿನ ಭಯ ಇರುವ ಕಾರಣ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.